**ಹೆಚ್ಚುವರಿ ಸಿವಿಲ್ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಧೀಶರ ನ್ಯಾಯಾಲಯ,**
**ಕೆ.ಆರ್.ನಗರ .**
**ಸಿ.ಸಿ ನಂಃ 1237 / 2016**

| | | |
|---|---|---|
| **ಸಾಕ್ಷಿಯ ಹೆಸರುಃ** | **ಎಸ್ ಗಂಗಾಧರ** | **ಫ್ರಾಸಾಃ 12** |
| **ತಂದೆಯ ಹೆಸರುಃ** | **ಲೇಟ್ ಸಣ್ಣಯ್ಯ** | **ಚಾಸಾಃ 9** |
| **ವಯಸ್ಸುಃ** | **41 ವರ್ಷ** | **ದಿಃ 17-06-2025** |
| **ಉದ್ಯೋಗಃ** | **ಪೋಲಿಸ್ ಉಪನೀರಿಕ್ಷಕರು, ಹೆಚ್.ಡಿ. ಕೋಟೆ ಪೋಲಿಸ್ ಠಾಣೆ** | **ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.** |
| **ವಾಸ ಸ್ಥಳಃ** | **ಹೆಚ್.ಡಿ ಕೋಟೆ.** | |

**ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ ಃ**

ನಾನು 2015 ರಿಂದ ಅಗಸ್ಟ್ 2016 ರವರೆಗೆ ಸಾಲಿಗ್ರಾಮ ಪೋಲಿಸ್ ಠಾಣೆಯಲ್ಲಿ ಪೋಲಿಸ್ ಉಪನೀರಿಕ್ಷಕರಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 25.04.2016 ರಂದು ನಾನು ಈ ಪ್ರಕರಣದ ಕಡತವನ್ನು ನಾನು ಚಾಸಾಃ 11 ರವರಿಂದ ಪಡೆದು ಈ ಪ್ರಕರಣದ ತನಿಖೆಯನ್ನು ಮುಂದುವರೆಸಿರುತ್ತೇನೆ.

ನಾನು ತನಿಖೆಯನ್ನು ಮುಂದುವರೆಸಿ, ದಿನಾಂಕ 06.06.2016 ರಂದು ನಾನು ಸಾಲಿಗ್ರಾಮ ಸಮುದಾಯ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಯವರಿಂದ ಚಾಸಾ-1 ರವರ ಗಾಯದ ಪ್ರಮಾಣ ಪತ್ರವನ್ನು ಪಡೆದು ಕಡತಕ್ಕೆ ಅಳವಡಿಸಿರುತ್ತೇನೆ.

ದಿನಾಂಕ 13.06.2016 ರಂದು ನಾನು ಮಿರ್ಲೆ ಗ್ರಾಮ ಪಂಚಾಯಿತಿಯ ಪಿ.ಡಿ.ಓ ರವರಿಂದ ಕೃತ್ಯ ನಡೆದ ಮನೆಯ ಅಸೆಸ್‌ಮೆಂಟ್ ರಿಜಿಸ್ಟರ್ ನಕಲನ್ನು ಪಡೆದು ಕಡತಕ್ಕೆ ಅಳವಡಿಸಿರುತ್ತೇನೆ.

ನಂತರ ಸಮಗ್ರ ತನಿಖೆಯನ್ನು ಪೂರೈಸಿ ಮೇಲ್ನೋಟಕ್ಕೆ ಆರೋಪಿಯ ವಿರುದ್ಧ ಆರೋಪ ಸಾಬೀತಾದ ಹಿನ್ನೆಲೆಯಲ್ಲಿ ನಾನು ಈ ಪ್ರಕರಣದಲ್ಲಿ ಆರೋಪಿಯ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

ನಿಪಿ.4 ರಲ್ಲಿರುವ ತಮ್ಮ ಸಹಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ನಿಪಿ.4(ಬಿ) ಎಂದು, ನಿಪಿ.5 ಮತ್ತು 6 ರಲ್ಲಿರುವ ತಮ್ಮ ಸಹಿಗಳನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ.5(ಬಿ) ಮತ್ತು ನಿಪಿ.6(ಬಿ)ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ ಆರೋಪಿಯ ಪರ ಶ್ರೀ ಟಿ.ಜಿ. ವಕೀಲರಿಂದ ಃ</u>**

ನಾನು ಮುದ್ದೆ ಮಾಲು-1 ಮತ್ತು 2 ನ್ನು ವೈದ್ಯಾಧಿಕಾಯರವರ ಮುಂದೆ ಹಾಜರುಪಡಿಸಿರುವುದಿಲ್ಲ. ಕೃತ್ಯ ನಡೆದ ಮನೆಯು ಶ್ರೀಮತಿ ವೇದಾವತಿ ಕೋಂ.ಸುರೇಶ ರವರಿಗೆ ಸೇರಿರುತ್ತದೆ ಎಂದು ನಾನು ಅಂತಿಮ ವರದಿಯ ಕಾಲಂ-17 ರಲ್ಲಿ ನಮೂದಿರುತ್ತೇನೆ ಎಂದರೆ ಸರಿ. ಸದರಿ ವೇದಾವತಿ ಕೋಂ.ಸುರೇಶ ರವರನ್ನು ನಾನು ವಿಚಾರಣೆ ಮಾಡಿರುವುದಿಲ್ಲ ಮತ್ತು ಅವರನ್ನು ಈ ಪ್ರಕರಣದ ಸಾಕ್ಷಿದಾರರನ್ನಾಗಿ ಮಾಡಿರುವುದಿಲ್ಲ. ನಿಪಿ.5 ಮತ್ತು 6 ರ ದಾಖಲೆಗಳಲ್ಲಿ ವೇದಾವತಿ ಕೋಂ.ಸುರೇಶ ರವರ ಹೆಸರು ನಮೂದಾಗಿರುವುದಿಲ್ಲ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ಕೃತ್ಯ ನಡೆದ ಮನೆಯು ಸದರಿ ವೇದಾವತಿರವರ ತಂದೆಯಾದ ಸಿದ್ದಲಿಂಗೇಗೌಡರ ಹೆಸರಿನಲ್ಲಿದ್ದು, ತಮ್ಮ ಸದರಿ ಮನೆಯನ್ನು ಪಾಲು ವಿಭಜನೆಯಲ್ಲಿ ಸದರಿ ವೇದಾವತಿರವರಿಗೆ ಕೊಟ್ಟಿದ್ದು, ಕೃತ್ಯ ನಡೆದ ಮನೆಯ ದಾಖಲಾತಿಗಳು ಇನ್ನೂ ಸಹ ಸಿದ್ದಲಿಂಗೇಗೌಡರ ಹೆಸರಿನಲ್ಲಿರುತ್ತದೆ ಎಂದು ನುಡಿದಿರುತ್ತಾರೆ. ಸದರಿ ವಿಷಯವನ್ನು ಚಾಸಾ-11 ರವರು ತನಿಖಾ ಕಾಲಕ್ಕೆ ಕೇಳಿ ತಿಳಿದುಕೊಂಡು ನನಗೆ ಹೇಳಿರುತ್ತಾರೆ. ಸದರಿ ವಿಷಯವನ್ನು ಚಾಸಾ-11 ರವರು ಭಾಗಶಃ ತನಿಖಾಧಿಕಾರಿಯಾಗಿದ್ದು, ಸದರಿ ವಿಷಯವನ್ನು ಚಾಸಾ-11 ರವರು ನನಗೆ ಹೇಳಿದ ಬಗ್ಗೆ ನಾನು ಅವರ ಹೇಳಿಕೆಯನ್ನು ಪಡೆದುಕೊಂಡಿರುವುದಿಲ್ಲ.

2. ಕೃತ್ಯ ನಡೆದ ಮನೆಯನ್ನು ಸಿದ್ದಲಿಂಗೇಗೌಡರು ಬೇರೆಯವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಈ ಪ್ರಕರಣದ ಸತ್ಯಾ ಸತ್ಯತೆಗಳನ್ನು ಪರಿಶೀಲಿಸದೆ ನಾನು ಆರೋಪಿಯ ವಿರುದ್ಧಸುಳ್ಳು ದೊಷಾರೋಪಣ ಪಟ್ಟಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಃ ಇರುವುದಿಲ್ಲ.**

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ಜೆಎಂಎಫ್‌ಸಿ ನ್ಯಾಯಾಧೀಶರು**
**ಕೆ.ಆರ್.ನಗರ**